Date : 21-9-2015

# ಗುಲ್ಬರ್ಗ ಪ್ರದೇಶದಲ್ಲಿ ತೊಗರಿ, ಉದ್ದು ಬೆಳೆಗಳ ಮೇಲೆ ಈಗಿನ ಮಳೆ ಪ್ರಭಾವ

ಗುಲಬರ್ಗ ಏರಿಯಾದಲ್ಲಿ ಇತ್ತೀಚೆಗಿನ ಮಳೆಯಿಂದಾಗಿ ತೊಗರಿ ಬೆಳೆ ಉತ್ತಮವಾಗುವ ನಿರೀಕ್ಷೆ ಮತ್ತು ಉದ್ದು, ಹೆಸರು ಬೆಳೆಯ ಮೇಲೆ ಪ್ರತಿಕೂಲ ಪರಿಣಾಮದ ನಿರೀಕ್ಷೆ. ತೊಗರಿ ಬೆಳೆ ಹೂ ಬಿಡುವ ಹಂತದಲ್ಲಿದ್ದು, ಹೆಚ್ಚು ಹೂ ಬಿಟ್ಟು ಹೆಚ್ಚು ಫಸಲು ಬರುವ ಸಂಭವವಿದೆ. ಉದ್ದು ಬೆಳೆ ಕಾಳು ಕಟ್ಟುವ ಹಂತದಲ್ಲಿರುವುದರಿಂದ ಈಗಿನ ಮಳೆ ಪ್ರತಿಕೂಲ ಪರಿಣಾಮ ಬೀರಿ ಬೆಳೆಯ ಗುಣಮಟ್ಟ ಕಡಿಮೆಯಾಗಬಹುದು. ಹೆಸರು ಗಿಡಗಳು ಈಗಿನ ಮಳೆಯಿಂದ ಬಾದಿತವಾಗಿ ಗಿಡಗಳ ಬೆಳವಣಿಗೆ ಕಡಿಮೆಯಾಗಿ ಇಳುವರಿ ಕಡಿಮೆಯಾಗುವ ಸಂಭವವಿದೆ. ಈ ಪ್ರದೇಶಗಳಲ್ಲಿ ಹೆಸರು ಹಿಂದಿನ ವರ್ಷಕ್ಕಿಂತ ಸುಮಾರು 20 ಶೇಕಡಾ ಹೆಚ್ಚು ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ತೊಗರಿ ಬಿತ್ತನೆ ಕಡಿಮೆಯಾಗಿದೆ.